## ಕಲ್ಪನೆ ಕಾವ್ಯ




# ಅಸ್ತ್ರ, ಶಸ್ತ್ರ

ಈತ ಬೇಡ ನಮ್ಮ ಮನೆಯಲ್ಲಿ
ಎನ್ನುವವರ ಮನದಲ್ಲೂ
ಈತನದೇ ಹಟ
ಮನೆಯಿಂದ ಹೊರ ಹಾಕಬಹುದು,
ಸುಲಭವಲ್ಲ ಮನದಿಂದ... ಹೊರದಬ್ಬಲು...
ಈತನೇ ದಶಕಂಠ

ಒಂದೇ ಮುಖವಿದ್ದರೆ
ತೋರಿಸಬಹುದು ಎದೆತಟ್ಟಿ ಎಲ್ಲರಿಗೆ.
ಅದರಲ್ಲಿ ನಿಜ ಸುಖ.
ಎಡಕ್ಕೈದು, ಬಲಕ್ಕೈದು
ಇರಲು, ನಿಜ ಯಾವುದು
ಹೇಳಬಲ್ಲೆಯಾ ದಶಮುಖ?

ನಗುಮೊಗದ ಮರೆಯಲ್ಲಿ
ಏನು ಷಡ್ಯಂತ್ರ ನಡೆವುದೋ
ಯಾರು ಬಲ್ಲರು?
ಗೋಮುಖದ ವ್ಯಾಘ್ರಗಳು
ಲಂಕೆಯಲ್ಲಷ್ಟೇ ಅಲ್ಲದೇ ನಮ್ಮ
ನಡುವೆಯೂ ಹಲವು ರಾವಣರು

ಧೃಢ ಸಂಕಲ್ಪ, ಧರ್ಮ ನಿಷ್ಠೆಯ
ಅಸ್ತ್ರಗಳ ಜೊತೆಗೆ
ಸುಸಂಸ್ಕೃತದ ಭಾವ
ಮನೋನಿಗ್ರಹ, ಕಾರ್ಯ ತತ್ಪರತೆಯ
ಶಸ್ತ್ರಗಳು ಬಳಿಯಿರಲು
ಓಟ ಕಿತ್ತುವನು ಈ ದಶಗ್ರೀವ.

**-ದೀಪಕ ಜೋಶಿ, ಬೆಳಗಾವಿ**

# ಸಂಯಮ

ಮನೆಯೊಳಗಿನ ರಾವಣನ
ಪ್ರತಿಮೆಗಳ ತರಬಹುದು
ಹೊರಗೆ ಹೇಗಾದರೂ
ತಲೆ ಬಗ್ಗಿಸಿಯೋ ಅಥವಾ
ಹೆಗಲ ಹೊರೆಯ ತಗ್ಗಿಸಿಯೋ
ಅಂತೂ ಇಂತೂ ದಾಟಿಸಬಹುದು
ಮುಂಬಾಗಿಲ ಚೌಕಟ್ಟಿನಾಚೆಗೆ
ಹೊಸಿಲ ದಾಟಿಸಿ ತರಬಹುದು;

ಆದರೆ ಹೊರಗೆಳೆಯಲಾದೀತೇ
ಮನದೊಳಡಗಿದ ಅರಿಷಡ್ವೈರಿಗಳೆಂಬ
ದಶಕಂಠನ ದಶಮುಖಗಳ
ಕಳಚಲಾದೀತೇ, ಮನುಜರ
ಮುಖವಾಡಗಳ ಹಲವು
ನಾಟಕಗಳ ಬಯಲಿಗೆಳೆಯಲಾದೀತೇ
ಮನೋನಿಗ್ರಹವ ಸಂಯಮವ
ಸಾಧಿಸಲು ಅಪ್ಪಿಕೊಳಲು
ಬದುಕು ಬಂದಂತೆಯೇ
ಇದ್ದಂತೆಯೇ ಒಪ್ಪಿಕೊಳಲು

**-ಶಾಂತಲಾ ರಾಜಗೋಪಾಲ್**
**ಬೆಂಗಳೂರು**